# ಮಜ್ಜಿಗೆ ಕಡೆಯುವ ಸಾಧನ

ಇದು ಮಜ್ಜಿಗೆ ಕಡೆಯುವ ಸಾಧನವಾಗಿದ್ದು, ಇತ್ತೀಚಿನ ದಿನಗಳಲ್ಲಿ ಕಣ್ಮರೆಯಾಗುತ್ತಿದೆ. ಹಿಂದಿನ ಕಾಲದಲ್ಲಿ ಇದೇ ರೀತಿಯ ಸಾಧನವನ್ನು ದೊಡ್ಡ ಜಾತಿಯ ಬಿದಿರಿನಿಂದ ತಯಾರಿಸುತ್ತಿದ್ದರು. ಉದ್ದದ ಕೋಲಿನ ತುದಿಯಲ್ಲಿ ಚಪ್ಪಟೆಯಾಕಾರದ ರಂಧ್ರವಿರುವ ವೃತ್ತಾಕಾರದ ತಟ್ಟೆಯಿದೆ. ಇದನ್ನು ಉಪಯೋಗಿಸಿಕೊಂಡು, ಸಿಲಿಂಡರ್ ಆಕಾರದ ಕೊಳವೆಯೊಳಗೆ ಮಜ್ಜಿಗೆ ಹಾಕಿ ಬೆಣ್ಣೆ ತೆಗೆಯುತ್ತಿದ್ದರು. ಇದನ್ನು ಶೃಂಗೇರಿಯ ಕೆರೆಮನೆ ದಿನೇಶ್ ಅವರ ಮನೆಯಲ್ಲಿ ಕಾಣಬಹುದಾಗಿದೆ.

**-ಶ್ರೀರಘುನಂದನ ಕೆ., ಶೃಂಗೇರಿ**





# ಅಪರೂಪದ ವೀರಭದ್ರ ವಿಗ್ರಹ

ಈ ವಿಗ್ರಹ ಐತಿಹಾಸಿಕವಾಗಿ ಪ್ರಸಿದ್ಧವಾದ ನಿಜಗಲ್ಲಿನ ಕೋಟೆಯಲ್ಲಿದೆ. ಈ ಏಕಶಿಲಾ ವೀರಭದ್ರಸ್ವಾಮಿ ನೆಲಮಟ್ಟದಿಂದ ಮಾಡಿನವರೆಗೆ ಬೃಹದಾಕಾರದಲ್ಲಿ ನಿಂತಿರುವ ಚತುರ್ಭುಜ ಮೂರ್ತಿ. ಈ ವೀರಭದ್ರನಿಗೆ ಅರ್ಚಕರು ಏಣಿಯ ಮೇಲೇರಿ ಹೂ ಹಾಕಿ ಪೂಜೆ ಮಾಡಬೇಕು. ವಿಗ್ರಹದ ಬಲಭಾಗದಲ್ಲಿ ಭದ್ರಕಾಳಿಯ ಮೂರ್ತಿಯೂ ಇದೆ. ಇಂತಹ ವಿಗ್ರಹ ಅತೀ ವಿರಳ. ತುಮಕೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿದೆ ಈ ನಿಜಗಲ್ಲು.

**-ಶಶಿರೇಖಾ ನಾಗೇಂದ್ರ, ಕುಣಿಗಲ್**

# ತೆಂಗಿನ ಗರಿಯ ಕಲಾಕೃತಿ

ಕ್ರಿಯಾಶೀಲ ಮನದ ಕಲಾವಿದರು ಕಲ್ಪವೃಕ್ಷದ ವಿವಿಧ ಭಾಗಗಳನ್ನು ಕಲಾಕೃತಿಯನ್ನಾಗಿ ರೂಪಿಸುತ್ತಲೇ ಬಂದಿದ್ದಾರೆ. ತೆಂಗಿನಗರಿಯಿಂದ ಕಲಾವಿದರೊಬ್ಬರು ಆಕರ್ಷಕ ತಟ್ಟೆ ಹಾಗೂ ಬಟ್ಟಲನ್ನು ರೂಪಿಸಿದ್ದಾರೆ. ಕೆಲವು ಸಮಾರಂಭಗಳಲ್ಲಿ ಉಡುಗೊರೆ ಕೊಡಲು ಇದು ಉಪಯೋಗವಾಗುತ್ತದೆ. ತೀರ್ಥಹಳ್ಳಿಯ ಫಿನಿಕ್ಸ್ ಸಂಸ್ಥೆಯ ಸೃಜನಶೀಲ ಕಲಾವಿದೆಯಾದ ಪದ್ಮಜಾ ಜೋಯ್ಸ್ ಅವರು ತಮ್ಮ ಕೈಚಳಕದಿಂದ ತೆಂಗಿನಗರಿಗಳಿಗೆ ಕಲಾಕೃತಿಯ ರೂಪ ನೀಡಿದ್ದಾರೆ.

**-ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ**

